# ಸಾಹಿತ್ಯ ಸಮ್ಮೇಳನಗಳ ಪರಿಕಲ್ಪನೆ ಬದಲಾಗಬೇಕೆ?

ವೆಂಕೋಬರಾವ್ ಎಂ. ಹೊಸಕೋಟೆ

ಸಾಹಿತಿ ಮತ್ತು ಶಿಕ್ಷಣ ತಜ್ಞ, ಎಂ.ಇ.ಎಸ್. ಶಿಕ್ಷಣ ಮಹಾವಿದ್ಯಾಲಯ,
ರಾಜಾಜಿನಗರ, ಬೆಂಗಳೂರು.

**Received: 24/11/2024 ; Acepted:15/12/2024 ; Published: 09/01/2025**

**DOI: https://doi.org/10.5281/zenodo.14619685**

## ABSTRACT:

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾಗಿ ಕನ್ನಡ ನಾಡಿನ ಸಾಹಿತ್ಯಿಕ, ಸಾಂಸ್ಕೃತಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಕರ್ನಾಟಕ, ಕನ್ನಡ, ಕನ್ನಡಿಗ ಇನ್ನಿತರ ನೆಲೆಗಳಲ್ಲಿ ಪ್ರೇರಕಶಕ್ತಿಯಾಗಿ ದುಡಿಯುತ್ತಿದೆ. ನಾಡು ನುಡಿ ಚಿಂತನೆಗಳೊಂದಿಗೆ ಕನ್ನಡಿಗರನ್ನು ಒಂದು ಗೂಡಿಸುವ ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಾ, ಸಾರ್ಥಕವಾದ ತನ್ನ ಅಸ್ತಿತ್ವವನ್ನು ಮೆರೆಸುತ್ತಾ ಬಂದಿದೆ. ಅಂದಿನ ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರು ಹಾಗೂ ಸರ್.ಎಂ. ವಿಶ್ವೇಶ್ವರಯ್ಯನವರ ಶ್ರಮದ ಫಲವಾಗಿ ಪರಿಷತ್ತು ಸ್ಥಾಪನೆಗೊಂಡಿತು. ಅನಂತರದಲ್ಲಿ ಮಿರ್ಜಾ ಇಸ್ಮಾಯಿಲ್ ಅವರ ನೆರವಿನಿಂದ ಪುಷ್ಠಿ ಪಡೆಯಿತು. ಸಮ್ಮೇಳನಗಳನ್ನು ನಡೆಸಲು ಮೈಸೂರು ಸಂಸ್ಥಾನವು ಅನುದಾನ ರೂಪದಲ್ಲಿ ಹಣವನ್ನು ಕೊಡುತ್ತಿತ್ತು. ತದನಂತರ ಕರ್ನಾಟಕ ಸರ್ಕಾರವು ಅನುದಾನ ನೀಡುತ್ತಾ ಬರುತ್ತಿದೆ. ಸರ್ಕಾರ, ಸರ್ಕಾರೇತರ ಕನ್ನಡ ಸಂಘ ಸಂಸ್ಥೆಗಳು, ಕನ್ನಡ ಒಳಿತು ಉಳಿಯುವಿಕೆಗಾಗಿ, ಪರಿಷತ್ತಿನ ನೆರವಿಗೆ ಬಂದು ಸಮ್ಮೇಳನಗಳನ್ನು ನಡೆಸಲು ಅನುವು ಮಾಡಿಕೊಡಬೇಕಾಗಿದೆ. ಪರಿಷತ್ತು ಪ್ರಾರಂಭದ ದಿನಗಳಲ್ಲಿ ಒಂದು ಪ್ರಧಾನ ಸಮ್ಮೇಳನವನ್ನು ನಡೆಸುತ್ತಿತ್ತು ಕ್ರಮೇಣ ವಿಚಾರಗೋಷ್ಠಿಗಳು, ಉತ್ಸವಗಳು, ಆರಾಧನೆ, ಮರ್ಯಾದೆ, ಮುಖ್ಯವಾದ ವಾದಗಳು, ತತ್ವಗಳು ಮತ್ತು ಪ್ರಯೋಗಗಳನ್ನು ಆಯಾಕಾಲಮಾನದ ಸಾಹಿತ್ಯ, ಸಾಂಸ್ಕೃತಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ನಾಡಿನ ಬದಲಾವಣೆಗಳಿಗೆ ಅನುಗುಣವಾಗಿ ನಡೆಸುತ್ತ ಬಂದಿದೆ. ಸಮ್ಮೇಳನಗಳಲ್ಲಿ ಪರಿಷತ್ತು ಮತ್ತು ಸರ್ಕಾರಗಳು ಕರ್ನಾಟಕ, ಕನ್ನಡಿಗ ಮತ್ತು ಕನ್ನಡ, ಶಿಕ್ಷಣ ಹಾಗೂ ಬದುಕಿನ ಇನ್ನಿತರ ಕ್ಷೇತ್ರಗಳಲ್ಲಿ ಆಗಬೇಕಾದ ಕಾರ್ಯಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಆಧುನೀಕತೆಯಲ್ಲಿಂದು ಸಾಹಿತ್ಯ ಸಮ್ಮೇಳನಗಳ ಪರಿಕಲ್ಪನೆಯು ಬದಲಾಗಬೇಕಾದ ಅನಿವಾರ್ಯತೆ ಇದೆ.

## KEYWORDS:

ಮಹಿಳೆ, ಬಹುಭಾಷಾಸಂಸ್ಕೃತಿ, ನಾಡು-ನುಡಿ, ಸಂಸ್ಕೃತಿ, ವರದಿಗಳು, ನಿರ್ಣಯಗಳು, ಪರಿಕಲ್ಪನೆ.

ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರ ಆಯ್ಕೆಯು, ಹಲವು ಗೊಂದಲಗಳ ನಡುವೆಯು ಪೂರ್ಣ ವಿರಾಮ ಬಿದ್ದಿದೆ. ಸಾರ್ವಜನಿಕವಾಗಿ ಚರ್ಚೆಯಾದಂತಹ ಸಾಹಿತ್ಯ ದಿಗ್ಗಜರು ಪ್ರತಿಸ್ಪರ್ಧಿಯಾಗಿದ್ದರು. ಜಾನಪದ ವಿದ್ವಾಂಸರಾದ ಗೊ.ರು. ಚನ್ನಬಸಪ್ಪನವರು 87ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿರುವುದು ಕನ್ನಡಿಗರು ಹೆಮ್ಮೆ ಪಡುವ ವಿಷಯವಾಗಿದೆ. ಜಾನಪದವಿಂದು ಅಳಿವು-ಉಳಿವಿನ ಹಾದಿಯಲ್ಲಿದೆ. ಸಾವಿರಾರು ಕಲಾವಿದರಿಗೆ, ಜಾನಪದ ಕಲೆ, ಸಂಗೀತ, ನೃತ್ಯ, ಹಾಡು ಮುಂತಾದವುಗಳಲ್ಲಿ ಪ್ರತಿಭೆ ಇದ್ದರೂ, ಸರ್ಕಾರದ ಸಹಾಯಪಡೆಯದೆ, ವೈಯುಕ್ತಿಕವಾಗಿ ಜನಮಾನಸದ ಮನಸ್ಸಿನಲ್ಲಿ ನೆಲಸಿದ್ದಾರೆ. ಅಂತಹ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಬೇಕಾಗಿದೆ. ಪರಿಷತ್ತಿನ ಕಾರ್ಯಕಾರಿ ಸಮಿತಿಯು ಸರ್ವಾನುಮತದಿಂದ ಗೊ.ರು. ಚನ್ನಬಸಪ್ಪನವರನ್ನು ಆಯ್ಕೆ ಮಾಡಿ, ಅವರ ಹಿರಿತನಕ್ಕೆ ಪ್ರಾಧಾನ್ಯ ನೀಡಿದ್ದಾರೆ. ಸಮ್ಮೇಳನಾಧ್ಯಕ್ಷರುಗಳಲ್ಲಿ, ಶ್ರೀಮತಿ. ಶಾಂತದೇವಿಮಾಳವಾಡ, ಡಾ.ಗೀತಾನಾಗಭೂಷಣ, ಡಾ. ಕಮಲ ಹಂಪನ, ಶ್ರೀಮತಿ, ಜಯದೇವಿತಾಯಿಲಿಗಾಡೆ ಮುಂತಾದ ಕೆಲವೇ ಮಹಿಳೆಯರಿದ್ದಾರೆ. ಸಮ್ಮೇಳನದ ಅಧ್ಯಕ್ಷರನ್ನಾಗಿ ಮುಂದಿನ ದಿನಮಾನಗಳಲ್ಲಿ ಮಹಿಳೆಯರಿಗೆ ಆದ್ಯತೆ ನೀಡಬೇಕಿದೆ.

ಕರ್ನಾಟಕದಲ್ಲಿ, ಅದರಲ್ಲೂ ಬೆಂಗಳೂರಿನಂತಹ ನಗರ ಪ್ರದೇಶಗಳಲ್ಲಿ ದ್ವಿಭಾಷಾ ಮತ್ತು ಬಹುಭಾಷಾ ಸಂಸ್ಕೃತಿಯ ಜನರಿರುವುದರಿಂದ, ಸಂಸ್ಕೃತಿ ದೃಷ್ಟಿಯಿಂದ, ಬಹು ಸಂಸ್ಕೃತಿಯನ್ನು ಒಪ್ಪಿಕೊಳ್ಳಬಹುದಾದರೂ, ಬಹುಭಾಷೆಗಳನ್ನು ಕನ್ನಡಿಗರೂ ಕಲಿತರೂ, ಅನ್ಯಭಾಷಿಕರಿಗೆ ಕನ್ನಡವನ್ನು ಕಲಿಸಬೇಕು,ದಿನನಿತ್ಯದ ವ್ಯವಹಾರಗಳಲ್ಲಿ ಕನ್ನಡವನ್ನು ಮಾತನಾಡುವುದರೊಂದಿಗೆ ಕನ್ನಡತನವನ್ನು ಉಳಿಸಿಕೊಂಡು ಬರಬೇಕಿದೆ. ಏಕೆಂದರೆ ಕರ್ನಾಟಕದಲ್ಲಿ ಕನ್ನಡವೇ ಸಾರ್ವಭೌಮಭಾಷೆಯಾಗಿದೆ. ಸಮ್ಮೇಳನಗಳಲ್ಲಿ ಸಾಮಾನ್ಯವಾಗಿ ಸಾಹಿತ್ಯದ ವಿಚಾರಧಾರೆಗಳ ಬಗೆಗೆ ಚರ್ಚೆಗಳಿರುತ್ತವೆ. ಕರ್ನಾಟಕ ರಾಜ್ಯದ ಜನಜೀವನದ ಆಗು-ಹೋಗುಗಳು, ಕನ್ನಡಿಗರ ಸಮಸ್ಯೆಗಳಿಗೆ ಸಿಗಬಹುದಾದ ಪರಿಹಾರಗಳು, ಆಧುನೀಕವಾಗಿಂದು ರಾಜ್ಯವು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಸಾಹಿತ್ಯಿಕವಾಗಿ ಹಾಗೂ ಕನ್ನಡ ನಾಡು-ನುಡಿ, ಒಳನಾಡು, ಗಡಿನಾಡು ಮತ್ತು ಹೊರನಾಡುಗಳಲ್ಲಿ ಕನ್ನಡಭಾಷೆಯ ಸ್ಥಿತಿ-ಗತಿಗಳು ಹೇಗಿದೆ ? ಕನ್ನಡದ ಅಸ್ತಿತ್ವವನ್ನು ಉಳಿಸುವುದಾದರೂ ಹೇಗೆ ? ಎಂಬುದನ್ನು ಚಿಂತಿಸಬೇಕಿದೆ. ಕನ್ನಡಿಗರಿಂದು ಸಾಕಷ್ಟು ಸಾಹಿತ್ಯಿಕವಾಗಿ ಸಾಧಿಸಿದ್ದೇವೆ. ಆದರೆ ಕನ್ನಡ ನಾಡು-ನುಡಿಗಳ ಬೆಳವಣಿಗೆಗೆ ಇನ್ನೂ ಹೆಚ್ಚಿನ ಒತ್ತನ್ನು ನೀಡಬೇಕಿದೆ.

ಸಮ್ಮೇಳನಗಳು ಕನ್ನಡ ನಾಡು ನುಡಿಗಳ ಬಗೆಗೆ ಕನ್ನಡಿಗರ ಅಭಿಮಾನವನ್ನು ಜಾಗೃತಗೊಳಿಸುತ್ತದೆ. ಲೇಖಕರು ಪ್ರಕಾಶಕರು, ಅಭಿಮಾನಿಗಳು, ಸರಸ್ವತಿ ದೇಗುಲದ

ಆಧಾರ ಸ್ತಂಭವಾಗಿದ್ದಾರೆ. ಆದುದರಿಂದ ಸಮ್ಮೇಳನಗಳಿಗೆ ಭವ್ಯ ಪರಂಪರೆ ಇದೆ. ಪ್ರೊ. ಚಂದ್ರಶೇಖರ್ (ಚಂಪಾ) ಅವರ ಅಭಿಪ್ರಾಯದಂತೆ, ಕಳೆದ ಸಮ್ಮೇಳನಗಳ ಅಧ್ಯಕ್ಷೀಯ ಭಾಷಣಗಳನ್ನು ಮೆಲಕು ಹಾಕಿದಾಗ ಒಂದು ಮೆಗಾಧಾರಾವಾಹಿಯ ಎಪಿಸೋಡುಗಳನ್ನು ನೋಡಿದ ಅನುಭವವಾಗುತ್ತದೆ ಎಂದಿದ್ದಾರೆ. ಏಕೆಂದರೆ ಅನೇಕ ಪೀಳಿಗೆಗಳ ಕಣ್ಣ ಕ್ಯಾಮರಾಗಳಲ್ಲಿ ಮೂಡಿದ, ಕನ್ನಡ ನಾಡಿನ ಬಿಂಬಗಳ ಚಿತ್ರಮಾಲೆಗಳು ಒಂದೊಂದಾಗಿ ಬಿಚ್ಚಿಕೊಳ್ಳುವಂತೆ ಕಾಣುತ್ತದೆ ಎಂಬುದು ಪ್ರಶಂಸಾರ್ಹವಾದುದಾಗಿದೆ. ಸಮ್ಮೇಳನಗಳಲ್ಲಿ ನಡೆಯುವ ಚಿಂತನೆಗಳಿಂದ ಜನತೆಯು ಒಂದಿಷ್ಟು ಕಲಿಯುತ್ತಾರೆ. ಹಾಗೆಯೇ ಸಾಹಿತಿಗಳು, ಸಮ್ಮೇಳನಾಧ್ಯಕ್ಷರುಗಳು, ಜನತೆಯೊಂದಿಗೆ ಸಂವಾದ ನಡೆಸಿ ಸಾಕಷ್ಟು ಕಲಿಯುತ್ತಾರೆ. ಸಮ್ಮೇಳನಗಳು ಜಾತ್ರೆಗಳು, ಸಂತೆಗಳು, ಆಹಾರ ಸಮ್ಮೇಳನಗಳು ಎಂದು ಟೀಕೆ ಮಾಡುತ್ತಾರೆ. ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ ಅವುಗಳಿಂದಲೂ ಕನ್ನಡಿಗರೆಲ್ಲರೂ ಒಂದೆಡೆ ಸೇರುತ್ತಾರೆ. ಪರಸ್ಪರ ಚರ್ಚಿಸುತ್ತಾರೆ. ಒಟ್ಟಿಗೆ ಊಟ ಮಾಡುತ್ತಾರೆ. ತಮ್ಮದೇ ಆಲೋಚನೆ, ಚಿಂತನೆಗಳು, ಭಾವನೆಗಳನ್ನು, ಬದುಕಿನ ದುಃಖ ದುಮ್ಮಾನಗಳನ್ನು ಸಾಹಿತ್ಯಿಕ ಚಿಂತನೆಗಳನ್ನು, ನಾಡು-ನುಡಿ, ಸಂಸ್ಕೃತಿ ಮುಂತಾದವುಗಳ ಬಗೆಗೆ ಮುಕ್ತವಾಗಿ ಚಿಂತಿಸಲು ಸಮ್ಮೇಳನಗಳು ಒಂದು ವೇದಿಕೆಯನ್ನು ಸೃಷ್ಟಿಸುತ್ತದೆ.

ಕನ್ನಡ ಸಾಹಿತ್ಯ ಸಮ್ಮೇಳನಗಳು ಸಕಾಲಿಕ, ಸರ್ವಕಾಲಿಕ ಸಂಗತಿಗಳು ವಿಚಾರಯೋಗ್ಯ ಮತ್ತು ಮಾನವಯೋಗ್ಯ ವಿಚಾರಗಳನ್ನು ಬಿಚ್ಚಿಡುತ್ತಾ, ಮೌಲ್ಯಗಳನ್ನು ತುಂಬುತ್ತದೆ, ಇದರಿಂದ ಜನತೆಯಲ್ಲಿ ಸಾರ್ವತ್ರಿಕ ಜಾಗೃತಿ ಉಂಟಾಗುತ್ತದೆ. ಏಕೆಂದರೆ ಸಮ್ಮೇಳನಗಳು ಉತ್ಸಾಹದ ಉತ್ಸವಗಳಾಗದೆ, ಸಾಹಿತ್ಯದ ಸವಿಯನ್ನು ಜನತೆಗೆ ಬಡಿಸುತ್ತಾ, ದೇಹ ಮತ್ತು ಮನಸ್ಸಿಗೆ ಮೇವನ್ನು ಕೊಡುತ್ತಿರುವುದು ಸಂತಸದಾಯಕವಾಗಿದೆ.

**ಸಮ್ಮೇಳನಗಳಲ್ಲಿ ಬದಲಾಗಬೇಕಾದದ್ದು:**

» ಸಮ್ಮೇಳನಗಳು ಕ್ರಿಯಾತ್ಮಕ ಸಾಹಿತ್ಯಕ್ಕೆ ಆದ್ಯತೆ ನೀಡುವುದಲ್ಲದೆ ಅದರ ಕಾರ್ಯ ಕ್ಷೇತ್ರವನ್ನು ವಿಸ್ತರಿಸುವುದು.

» ಭಾವಪ್ರಧಾನ ಉತ್ಸವದೊಂದಿಗೆ ಬೌದ್ಧಿಕ ಮೇವಿಗೆ ಹೆಚ್ಚು ಒತ್ತು ನೀಡುವುದು.

» ಕನ್ನಡನಾಡು, ನುಡಿ, ಜಲ, ಸಂಶೋಧನಾ ಕ್ಷೇತ್ರ, ವಿಮರ್ಶೆಗಳಿಗೆ ಆದ್ಯತೆ ಕೊಡುವುದು.

» ಕನ್ನಡನಾಡು-ನುಡಿ, ಸಾಹಿತ್ಯ ಕ್ಷೇತ್ರದಲ್ಲಿ ದುಡಿದವರಿಗೆ ಸನ್ಮಾನಿಸುವುದು.

» ಸಮ್ಮೇಳನಗಳಲ್ಲಿ ಪರಿಷತ್ತು ಪ್ರಕಟಿಸಿರುವ ಕನ್ನಡ ಪುಸ್ತಕಗಳು ಕಡಿಮೆ ಬೆಲೆಯಲ್ಲಿ ಸಿಗುವಂತಾಗಬೇಕು.

» ಸಮ್ಮೇಳನಗಳಲ್ಲಿ ಪರಿಷತ್ತಿನ ನೇತೃತ್ವವನ್ನು ಅನುಭವಿ ಸಾಹಿತಿಗಳಿಗೆ ವಹಿಸುವುದು ಅಲ್ಲದೆ

ರಾಜಕೀಯ ಮತ್ತು ಧರ್ಮದಿಂದ ದೂರವಿರುವುದು.

» ಸಮ್ಮೇಳನಗಳಲ್ಲಿ ಕೈಗೊಂಡ ನಿರ್ಣಯಗಳು, ಅನುಷ್ಠಾನಗೊಳ್ಳುವಂತೆ, ಪರಿಷತ್ತಿನ ಅಧ್ಯಕ್ಷರು, ಸಮ್ಮೇಳನಾಧ್ಯಕ್ಷರು, ಕಾರ್ಯಕಾರಿ ಸಮಿತಿಯ ಸದಸ್ಯರು ಕೂಡಿ, ಅನುಷ್ಠಾನ ಸಮಿತಿಯೊಂದನ್ನು ಪರಿಷತ್ತಿನಲ್ಲಿ ತೆರೆದು ಜವಾಬ್ದಾರಿಯನ್ನು ನೀಡುವುದು.

» ನಿರ್ಣಯಗಳು, ಅನುಷ್ಠಾನಗೊಳ್ಳದೆ, ನಿರ್ಣಯಗಳಾಗಿಯೇ ಇವೆ. ವರದಿಗಳು ವರದಿಗಳಾಗಿಯೇ ಇವೆ. ಅವುಗಳಿಗೆ ಮರು ಜೀವ ನೀಡುವುದು.

» ಕನ್ನಡ ಹೋರಾಟಗಾರರ ಮೇಲಿರುವ ಪೊಲೀಸ್ ಕೇಸ್‌ಗಳನ್ನು ಕಡ್ಡಾಯವಾಗಿ ವಾಪಸ್ಸು ಪಡೆಯುವಂತೆ ಮಾಡುವುದು.

» ಮಹಾಜನ್ ವರದಿ, ಡಾ.ಸರೋಜಿನಿ ಮಹಿಷಾ ವರದಿ, ಡಾ.ಗೋಕಾಕ್ ವರದಿ, ಚಂಪಾ ವರದಿ ಮತ್ತು ಬರಗೂರು ವರದಿಯನ್ನು ಶೀಘ್ರವಾಗಿ ಜಾರಿಗೆ ತರುವಂತೆ ಪ್ರೇರೇಪಿಸುವುದು.

» ಕೇಂದ್ರಿಯ ವಿದ್ಯಾಲಯಗಳಲ್ಲಿ ಕಡ್ಡಾಯವಾಗಿ ಕನ್ನಡ ಬೋಧಕರನ್ನು ನೇಮಿಸಿ, ಕನ್ನಡಿಗರಿಗೆ ಉದ್ಯೋಗವಾಕಾಶ ದೊರಕಿಸಿಕೊಡುವುದು.

» ಸರ್ಕಾರಿ ಸಂಘ ಸಂಸ್ಥೆಗಳಲ್ಲಿ ಮಾತ್ರವಲ್ಲದೆ, ಖಾಸಗಿ ಸಂಘ-ಸಂಸ್ಥೆಗಳು ಆಡಳಿತದಲ್ಲಿ ಕನ್ನಡ ಭಾಷೆಗೆ ಆದ್ಯತೆ ನೀಡುವುದು.

» ರಾಜ್ಯದ ಎಲ್ಲಾ ಶಾಲಾ-ಕಾಲೇಜುಗಳಿಗೆ ಪರಿಷತ್ ಪತ್ರಿಕೆ ತಲುಪುವಂತಹ ಕೆಲಸವಾಗಬೇಕಿದೆ.

» ಪ್ರಕಾಶಕರು, ಲೇಖಕರು, ತಾವು ಬರೆದ ಒಂದೊಂದು ಕೃತಿಯನ್ನು ಕಡ್ಡಾಯವಾಗಿ ಪರಿಷತ್ತಿನ ಗ್ರಂಥಾಲಯಕ್ಕೆ ನೀಡುವುದು.

» ಸಮ್ಮೇಳನಗಳಲ್ಲಿ, ಸಾಹಿತ್ಯ ಮತ್ತು ಸಾಹಿತ್ಯದ ಎಲ್ಲಾ ಪ್ರಕಾರಗಳಿಗೆ ಆದ್ಯತೆ ನೀಡುವುದು. ಉದಾ: ವಚನ ಸಾಹಿತ್ಯ, ದಾಸ ಸಾಹಿತ್ಯ.. ಇಲ್ಲವಾದರೆ ನಮಗೆ ಆದ್ಯತೆ ನೀಡಿಲ್ಲ ಎಂಬ ಕೂಗು ಬರುತ್ತದೆ.

» ಹೊರನಾಡು, ಒಳನಾಡು ಮತ್ತು ಗಡಿನಾಡಿನ ಸಾಹಿತಿಗಳು, ಕನ್ನಡ ಹೋರಾಟಗಾರರು, ಕನ್ನಡ ಸಂಘ ಸಂಸ್ಥೆಗಳಿಗೆ ಆದ್ಯತೆ ನೀಡಿ, ವಿಶೇಷವಾಗಿ ಆಹ್ವಾನ ನೀಡುವುದು.

» ಕನ್ನಡ ನಾಡಿನ ಹಿರಿಮೆ-ಗರಿಮೆಗೆ ದುಡಿದಂತಹ ಬದುಕಿನ ವಿವಿಧ ರಂಗದ ಜನತೆಗೆ ಆಹ್ವಾನಿಸಿ ಪ್ರೋತ್ಸಾಹಿಸುವುದು.

» ಸಮ್ಮೇಳನದ ವೇದಿಕೆಯ ಮೇಲೆ ಪರಿಷತ್ತಿನ ಅಧ್ಯಕ್ಷರು, ಸಮ್ಮೇಳನಾಧ್ಯಕ್ಷರು ಹಾಗೂ ಗೋಷ್ಠಿಗಳಲ್ಲಿ ಉಪನ್ಯಾಸ ಮಾಡುವವರಿಗೆ ಆದ್ಯತೆ ಇರಲಿ.

» ಸಮ್ಮೇಳನಗಳಲ್ಲಿ ಪ್ರಾಥಮಿಕ ಹಂತದಲ್ಲಿ ಮಾತೃಭಾಷಾ ಶಿಕ್ಷಣಕ್ಕೆ ಮಾಧ್ಯಮಕ್ಕೆ ಹೆಚ್ಚು ಆದ್ಯತೆ ನೀಡುವಂತೆ ಒತ್ತಾಯಿಸುವುದು.

» ಸಮ್ಮೇಳನಗಳಲ್ಲಿ ನಾಟಕ, ಕವಿಗೋಷ್ಠಿ, ಕೀರ್ತನೆ, ಗಾಯನ, ಜಾನಪದ, ಮುಂತಾದವುಗಳಿಗೆ ಮನ್ನಣೆ ಕೊಡುವುದು.

» ಕೇಂದ್ರವು ರಾಷ್ಟ್ರೀಯ ಗ್ರಂಥಭಂಡಾರವನ್ನು ಬೆಂಗಳೂರಿನಲ್ಲಿ ಸ್ಥಾಪಿಸುವಂತೆ ಮನವಿ ಮಾಡುವುದು.

» ಸಮ್ಮೇಳನಗಳಲ್ಲಿ, ಮಹಾರಾಷ್ಟ್ರ, ಗೋವ, ತಮಿಳುನಾಡು, ಇನ್ನಿತರ ಪ್ರದೇಶಗಳಲ್ಲಿ

ಕನ್ನಡಿಗರಿಗಾಗುತ್ತಿರುವ ಅನ್ಯಾಯವನ್ನು ಪ್ರತಿಭಟಿಸುವುದು. ಅಲ್ಲದೆ ಸರ್ಕಾರದ ಗಮನಕ್ಕೆ ತರುವುದು.

» ಸಮ್ಮೇಳನಗಳಲ್ಲಿ, ಬೆಂಗಳೂರಿನಂತಹ ನಗರಗಳ ಅನ್ಯಭಾಷಿಕರ ವಲಸೆಯನ್ನು ತಡೆದು ಕನ್ನಡವಾತಾವರಣ ಸೃಷ್ಟಿಸುವಂತೆ ಚರ್ಚೆ ಮಾಡುವುದು.
» ಸಮ್ಮೇಳನಗಳಲ್ಲಿ ಕೇಂದ್ರಾಡಳಿತ ಇಲಾಖೆಗಳ ನೇಮಕಾತಿಯಲ್ಲಿ ಕನ್ನಡಿಗರಿಗೆ ಪ್ರಾತಿನಿಧ್ಯತೆ ನೀಡಬೇಕೆಂದು ಠರಾವು ಹೊರಡಿಸುವುದು.
» ಸಮ್ಮೇಳನದಲ್ಲಿ, ಕೇಂದ್ರ ಸರ್ಕಾರಿ ಕಛೇರಿಗಳಲ್ಲಿ, ಕನ್ನಡ ಬಾರದವರಿಗೆ ಕನ್ನಡ ಕಲಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.
» ಆಧುನೀಕತೆಯಲ್ಲಿಂದು ಸಿನಿಮಾ, ಧಾರವಾಹಿಗಳ ಡಬ್ಬಿಂಗ್ ಸಂಸ್ಕೃತಿ ಹೆಚ್ಚಾಗಿದ್ದು, ಅವುಗಳ ನಿಯಂತ್ರಣಕ್ಕೆ ಕಾಯ್ದೆ ತರುವುದು, ಇಲ್ಲವಾದರೆ ಸ್ವಸೃಜನಶೀಲತೆ, ಪ್ರತಿಭೆ, ನಾಶವಾಗುವುದು.
» ಡಿ.ಎಂ. ನಂಜುಂಡಪ್ಪ ವರದಿಯನ್ನು ಜಾರಿಗೊಳಿಸುವುದರ ಮುಖೇನಾ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸುವುದು ಇದರಿಂದ ರಾಜ್ಯ ಇಬ್ಭಾಗವಾಗಬೇಕೆಂಬ ಕೂಗು ನಿಲ್ಲುವುದು.

ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಗಮನಿಸಿದಾಗ, ಸಮ್ಮೇಳನಾಧ್ಯಕ್ಷರ ಭಾಷಣಗಳು 6 ರಿಂದ 64.5 ಪುಟದಷ್ಟಿರುತ್ತವೆ. ಸುಮಾರು 50 ರಿಂದ ಶತಾಯುಷಿಗಳು ಸಹ ಸಮ್ಮೇಳನಾಧ್ಯಕ್ಷರಾಗಿದ್ದಾರೆ. 86 ಸಮ್ಮೇಳನಾಧ್ಯಕ್ಷರು ಆಯಾ ಕಾಲಘಟ್ಟಕ್ಕೆ ಅನುಗುಣವಾಗಿ, ಕನ್ನಡ ನಾಡು-ನುಡಿ, ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ಪತ್ರಿಕೋದ್ಯಮ, ತಂತ್ರಜ್ಞಾನ, ವಿಜ್ಞಾನ, ಮುಂತಾದವುಗಳ ಅವಶ್ಯಕತೆಗಳ ಬಗೆಗೆ ಬೆಳಕು, ಚೆಲ್ಲುತ್ತಾ, ಕನ್ನಡ-ನಾಡಿನ ಸರ್ವತೋಮುಖ ಬೆಳವಣಿಗೆಗಾಗಿ ದುಡಿದಿದ್ದಾರೆ. ದುರಂತವೆಂದರೆ, ಸಮ್ಮೇಳನಗಳಲ್ಲಿ ಕೈಗೊಂಡ ನಿರ್ಣಯಗಳು ನಿರ್ಣಯಗಳಾಗಿಯೇ ಉಳಿದಿವೆ. ಕೆಲವಂತೂ ಅನುಷ್ಠಾನಗೊಂಡಿದ್ದರೂ ಸಾಮಾಜಿಕ ಬದಲಾವಣೆಗೆ ತಕ್ಕಂತೆ ಬದಲಾದುದೇ ಹೆಚ್ಚಿದೆ. ಪರಿಷತ್ತು, ಸರ್ಕಾರ ಮತ್ತು ಕನ್ನಡ ಸಂಘಟನೆಗಳು, ಕನ್ನಡ ಸಂಘ - ಸಂಸ್ಥೆಗಳು, ಸಮ್ಮೇಳನಗಳಲ್ಲಿ ಕೈಗೊಳ್ಳುವ ನಿರ್ಣಯಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಿ ಅನುಷ್ಠಾನಗೊಳಿಸಬೇಕಾದ ಜರೂರು ಇಂದು ಸಾಕಷ್ಟಿದೆ. ಆದುದರಿಂದ ಸಾಹಿತ್ಯ ಸಮ್ಮೇಳನಗಳ ಪರಿಕಲ್ಪನೆ ಬದಲಾಗಬೇಕಾಗಿದೆ ಎಂದರೆ ತಪ್ಪಾಗಲಾರದಲ್ಲವೇ?

**ಪರಾಮರ್ಶನ ಗ್ರಂಥಗಳು:**

1. ಬೈರಮಂಗಲ ರಾಮೇಗೌಡ, (2011), ಬೆಂಗಳೂರು ಬಾಗಿನ, ಕ.ಸಾ.ಪ., ಬೆಂಗಳೂರು.
2. ಶ್ರೀನಿವಾಸಮೂರ್ತಿ ಕಾ.ವೆಂ., (2021), ಕನ್ನಡ ಚಿಂತನೆ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
3. ಜಾಣಗೆರೆ ವೆಂಕಟರಾಮಯ್ಯ, (2011), ಕನ್ನಡ ಚಳವಳಿ ಇತಿಹಾಸ, ಬೆಂಗಳೂರು ನಗರ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.